ರಾಮಾಯಣ ಸುಸೂತ್ರವಾಗಿ ಮುಗೀಲಿ. ಅಲ್ಲೀ ತಂಕ್ರಾ ಸ್ವಲ್ಪ ದೂರಾನೇ ಇದ್ಬಿಡು" ಅಣ್ಣ ಸ್ವತಾ ಹೇಳಿದ ಮೇಲೆ ದೂಸರಾ ಮಾತಿಲ್ಲ.

"ಡಾಕ್ಟ್ರ ಹತ್ರ ಹೋಗು ಮತ್ತೆ. ಉದಾಸೀನ ಮಾಡ್ಬೇಡ" ಎನ್ನುತ್ತಲೇ ಅಣ್ಣ ಎಣಿಸಿಕೊಟ್ಟ ನೋಟುಗಳನ್ನು ವ್ಯಾನಿಟಿಯಲ್ಲಿ ಭದ್ರಪಡಿಸಿಕೊಂಡು, ಬೆಳಗಾಮುಂಚೆ ತಾನೇ ಉಮೇದಿನಿಂದ ಅಷ್ಟಗಲಕ್ಕೆ ಹಾಕಿ ಬಣ್ಣ ತುಂಬಿದ್ದ ರಂಗೋಲಿಚಿತ್ರ ಓಡಾಡುವ ಜನರಿಂದ, ಆಟವಾಡುವ ಮಕ್ಕಳಿಂದ ತುಳಿಸಿಕೊಂಡು ಅಂದಗೆಟ್ಟಿದ್ದನ್ನು ನೋಡಿಯೂ ನೋಡದಂತೆ ಕಾವೇರಿ ಉದಾಸೀನದ ಹೆಜ್ಜೆಯಲ್ಲಿ ಉಣುಗೋಲಿನ ಕಡೆ ಹೋದವಳು ತಿರುಗಿ ನೋಡಿದರೆ ಮದುವಣಗಿತ್ತಿ ಮುಂಚೇಕಡೆಯ ಮೆಟ್ಟಿಲ ಮೇಲೆ ನಿಂತು ಕೈ ಅಲುಗಿಸುತ್ತಿದ್ದಾಳೆ. ಹುಡುಗಿ ಕಣ್ಣಲ್ಲಿ ನೀರು ಹಾಕುತ್ತಾಳೆಂದು ಗೊತ್ತಿದೆ ಕಾವೇರಿಗೆ. 'ನೀನೇ ನಂಗೆ ಕುಚ್ಚಿನ ಜಡೆ ಹಾಕ್ಬೇಕು', 'ನೀನೇ ನಂಗೆ ಧಾರೆ ಸೀರೆ ಉಡಿಸ್ಬೇಕು', 'ನೀನೇ ನಂಗೆ ಅಲಂಕಾರ ಮಾಡ್ಬೇಕು' ಎನ್ನುವಂತಾ ಕಾಲ ಅಲ್ಲ. ಸಾವಿರಗಟ್ಟಲೆ ಸುರಿದು ಬ್ಯೂಟಿಪಾರ್ಲರಿನವರನ್ನು ಮದುವೆಛತ್ರಕ್ಕೆ ಬರಲು ಗೊತ್ತುಪಡಿಸಿಕೊಂಡಿದ್ದಾಗಿದೆ. ಹಾಗಿದ್ದರೂ ಹೇಳಿದ್ದಳು ಶುಭದಾ,

"ನನ್ನ ಬಿಟ್ಟು ನೀನು ಎಲ್ಲೂ ಹೋಗ್ಬಾರ್ದು ಅತ್ತೇ. ಮದುವೆ ಮುಗಿಯೋ ತಂಕ್ರಾ ನನ್ನ ಜೊತೇನೇ ಇರ್ಬೇಕು."

★★★

ಒಂಟಿಯಾಗಿ ಓಡಾಡಿ ಅಭ್ಯಾಸ ಇಲ್ಲದವಳೇನಲ್ಲ ಕಾವೇರಿ. ಹೆದ್ದಾರಿ ತಲುಪಿ, ಕೈ ಅಡ್ಡ ಹಾಕಿ ಬಸ್ಸು ಹತ್ತಿ ಕುಳಿತವಳಿಗೆ ವಿಚಿತ್ರ ಸಂಕಟ, ದಣಿವು. ತನ್ನ ಹಣೆಬರಹವೇ ಹೀಗಾಗಿ ಹೋಯ್ತು ಎನ್ನುವ ನೋವು. ಸುಖದ ಬಟ್ಟಲು ಕೈಗೆಟುಕಿ, ತುಟಿಯವರೆಗೆ ಎತ್ತಿ ಹಿಡಿದು, ಇನ್ನೇನು ರುಚಿ ನೋಡಬೇಕೆನ್ನುವಾಗ ಬಟ್ಟಲು ಕೈ ಜಾರಿ ಬಿದ್ದು ನಿರೀಕ್ಷೆಗಳೆಲ್ಲಾ ಮಣ್ಣು ಪಾಲು. ಸೋದರಸೊಸೆ ಶುಭದಾ ಅಂದರೆ ಅವಳಿಗೆ ಹೊಟ್ಟೆಯಲ್ಲಿ ಹುಟ್ಟಿದ ಮಗಳಂತೆ ಮಮಕಾರ. ಆ ಮಗು ಬೆಳೆದು ದೊಡ್ಡವಳಾಗಿದ್ದೇ ಇವಳ ಮಡಿಲಿನಲ್ಲಿ. ಬರೀ ಹತ್ತು ಮೈಲಿ ದೂರದಲ್ಲಿದ್ದ ತಾಲ್ಲೂಕು ಕೇಂದ್ರದಲ್ಲಿ ಒಂದು ಸಣ್ಣ ಮನೆ ಮಾಡಿ ಕಾವೇರಿಯ ಅಣ್ಣ ನಾಗೇಶ ತಂಗಿಯನ್ನು ಅಲ್ಲಿಗೆ ರವಾನಿಸಿದ್ದರ ಹಿಂದೆ ಮನೆಯ ಶಾಂತಿ ಕಾಪಾಡಿಕೊಳ್ಳಬೇಕೆನ್ನುವ ಇರಾದೆಗಿಂತಾ ತಂಗಿ ದಿನವೂ ಕಣ್ಣೀರ ಕೂಳು ತಿನ್ನಬಾರದೆನ್ನುವ ಕಾಳಜಿ ಇತ್ತು. ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸೌಭಾಗ್ಯ ನಾದಿನಿಯ ಬಗ್ಗೆ ಹಂಗಿಸುವ ಮಾತಾಡುವುದನ್ನು ಕೇಳಿಸಿಕೊಂಡೂ ಅವಳ ಬದುಕನ್ನು ನರಕ ಮಾಡುವುದಕ್ಕೆ ನಾಗೇಶನ ಅಂತರಾತ್ಮ ಒಪ್ಪಿರಲಿಲ್ಲ. ತಂಗಿ ಅಂದರೆ ಅವನಿಗೆ ಎಲ್ಲರಿಗೂ ಸಹಜವಾಗಿ ಇರುವುದಕ್ಕಿಂತಾ ಒಂದು ತೂಕ ಹೆಚ್ಚಿಗೆ ಪ್ರೀತಿ. ಹಾಗೆಂದು ತಿಳಿದುಕೊಂಡಿದ್ದಾಳೆ ಕಾವೇರಿ. ಇಲ್ಲದಿದ್ದರೆ ತನಗೋಸ್ಕರ ಒಂದು ಬಾಡಿಗೆಮನೆ ಮಾಡಿ ದೂರ ಕೂರಿಸಬೇಕೆಂದು ಅವನು ನಿರ್ಧಾರ ಮಾಡಿದ್ದಾದರೂ ಯಾಕೆ? ಮೂಗಿಗೆ ಕವಡೆ ಕಟ್ಟಿಕೊಂಡು ಮನೆಯಲ್ಲಿ ದುಡಿಯುವ ಪುಗಸಟ್ಟೆ ಆಳನ್ನು ಪೇಟೆಯ ಸುಖಜೀವನಕ್ಕೆ ಭಾಜನಳನ್ನಾಗಿಸಲು ಸೌಭಾಗ್ಯ ಬಡಪೆಟ್ಟಿಗೆ ಒಪ್ಪಿರಲಿಲ್ಲ. ಕಡ್ಡಿ ಹೆಟ್ಟುವ ಹತ್ತು ಮಾತಾಡಿ ಗಂಡನನ್ನು ಅವನ ನಿರ್ಧಾರದಿಂದ ವಿಚಲಿತನನ್ನಾಗಿಸುವ ಪ್ರಯತ್ನ ಮಾಡಿದ್ದಳು. 'ನಿಮ್ಗೇನು ದುಡ್ಡು ಕುಣೀತಿದ್ಯಾ? ಬೇಡದ ಕಿತಾಪತಿ ತಲೇ ಮೇಲೆ ಎಳ್ಕೊಳ್ಳೋದ್ರಲ್ಲಿ ನಿಮ್ಮನ್ನ ಬಿಟ್ಟರಿಲ್ಲ. ನಿಮ್ಮಂತೋರನ್ನ ನೋಡೇ ಇಲ್ಲ ನಾನು...' ಬಾಯಿ ಕೊಟ್ಟು ಮಾತಿಗೆ ಮಾತು ಜೋಡಿಸಿದರೆ ತಾನೇ ಜಗಳ? ನಾಗೇಶ ಪ್ರತಿಕ್ರಿಯಿಸಲು ಹೋಗುತ್ತಿರಲಿಲ್ಲ.